


ತಾಜ್‌ಮಹಲಿನ ದ್ವಾರದ ಮುಂದೆ ಮಹಿಳೆಯರು

ನೈಜೀರಿಯಾಕ್ಕೆ ಹೋಗಿ ಶವವನ್ನು ತಂದೆ. ಇದಾದ ಬಳಿಕ ಅಮೆರಿಕಕ್ಕೆ ಹೋಗುವ ಯೋಜನೆಯನ್ನು ಬಿಟ್ಟುಬಿಟ್ಟೆ.

◆ **ನಿಮ್ಮ ಪ್ರಿಂಟಿಂಗ್ ಪ್ರೆಸ್ ಅನುಭವ ಹೇಗಿತ್ತು?**

ಒಂದು ದಿನ ಅಪ್ಪ '400 ಶಿಲ್ಲಿಂಗ್ ಸಂಬಳಕ್ಕೆ ಪತ್ರಿಕೆಯಲ್ಲಿ ನೌಕರಿ ಮಾಡುವ ಬದಲು ನೀನೇಕೆ ಸ್ವಂತ ಪ್ರೆಸ್ ಹಾಕಬಾರದು?' ಎಂದು ಕೇಳಿದರು. ನನಗೂ ಇದು ಸರಿಯೆನಿಸಿತು. ಕಲರ್ ಪ್ರಿಂಟಿಂಗ್‌ಪ್ರೆಸ್ ಆರಂಭಿಸಿದೆ. ಒಂದು ಸಣ್ಣ ಕೋಣೆಯಲ್ಲಿ ಮಶೀನ್ ಹಾಕಿದೆ. ನಡುರಾತ್ರಿಯ ತನಕ ಕೆಲಸ ಮಾಡಿ ಅದರ ಪಕ್ಕದಲ್ಲೇ ಮಲಗುತ್ತಿದ್ದೆ. ಅಪ್ಪನ ಗೆಳೆಯರು ಬೇಕಾದಷ್ಟು ಕೆಲಸ ಒದಗಿಸುತ್ತಿದ್ದರು. ಮುಂದೆ ಅದು ಕೀನ್ಯಾದ ಅತಿದೊಡ್ಡ ಮುದ್ರಣಾಲಯ ಆಯಿತು. 'ಫೈನಾನ್ಸ್ ಟೈಮ್ಸ್' ಪತ್ರಿಕೆ ನಮ್ಮಲ್ಲೇ ಪ್ರಿಂಟ್ ಆಗುತ್ತಿತ್ತು. 1995ರಲ್ಲಿ ಆ ಪತ್ರಿಕೆಯಲ್ಲಿ ಸರ್ಕಾರದ ವಿರುದ್ಧ ಲೇಖನ ಪ್ರಕಟವಾಯಿತು. ಆಗ ಅಪ್ಪನಿಗೆ ಪರಿಚಯವಿದ್ದ ಅರಾಪ್ ಮೊಯಿ ಕೀನ್ಯಾದ ಅಧ್ಯಕ್ಷರಾಗಿದ್ದರು. ಆದರೆ ಅವರು ಹಿಂದಿನ ಮೊಯಿ ಆಗಿರಲಿಲ್ಲ. ಬದಲಾಗಿದ್ದರು. ಸರ್ಕಾರವು ಲೇಖನ ಬರೆದ ಲೇಖಕನನ್ನು ಬಿಟ್ಟು ಮುದ್ರಕನಾದ ನನ್ನನ್ನು ಬಂಧಿಸಿತು. ಅಪ್ಪ ದೇಶದ್ರೋಹದ ಕಾನೂನಿನ ಪ್ರಕಾರ ಬಂಧನಕ್ಕೆ ಒಳಗಾದ ಮೊದಲ ಭಾರತೀಯ ಆಫ್ರಿಕನ್ನನಾದರೆ, ಅದೇ ಕಾನೂನಿನ ಅಡಿಯಲ್ಲಿ ದಸ್ತಗಿರಿಗೊಂಡ ಕೊನೆಯ ವ್ಯಕ್ತಿ ನಾನು. ಎರಡೂವರೆ ವರ್ಷ ಕೇಸು ನಡೆಯಿತು. ಗೆದ್ದೆ. ಇದರ ಪರಿಣಾಮವೆಂದರೆ ಆ ಕಾಯಿದೆಯೇ ರದ್ದಾಯಿತು.

◆ **ನಿಮ್ಮ ಮೊದಲ ಭಾರತದ ಭೇಟಿ ಯಾವಾಗ ಆಯಿತು?**